ದಿನಾಂಕಃ 29-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಅರ್ ವಕೀಲರಿಂದ**

ನಾನು ದ್ವೀತಿಯ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸಾಕ್ಷ್ಯ ನುಡಿಯಲು 3 ನೇ ವಾದಿ ಕರೆದುಕೊಂಡು ಬಂದಿರುತ್ತಾರೆ. ಈ ದಾವೆಯನ್ನು ದಾಸಪ್ಪನ ಕುಟುಂಬ್ಧರ 4 ಜನರ ವಿರುದ್ದ ಹೂಡಿರುತ್ತಾರೆ, ದಾಸಪ್ಪನ ಮನೆಯರು 4 ಜನರು ಸೇರಿ ಹನುಮಂತಪ್ಪನವರ ವಿರುದ್ದ ಹೂಡಿದ್ದಾರೆ ಉಳಿದವರ ವಿವರ ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಆಸ್ತಿಯ ವಿಚಾರವಾಗಿ ಹೂಡಿದ್ದಾರೆ ಎಂದರೆ ಸಾಕ್ಷಿ ಖಾಲಿ ಜಾಗದ ವಿಚಾರವಾಗಿ ಹೂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ, ಅಳತೆ ಗೊತ್ತಿದೆ. ಉತ್ತರ-ದಕ್ಷಿಣ 3ವರೆ ಅಡಿ ಖಾಲಿ ಜಾಗ ,ಪೂರ್ವ-ಪಶ್ಚಿಮ 22ವರೆ ಅಡಿ ಮನೆ ಇದೆ. ಹಿಂದುಗಡೆ 9 ಅಡಿ ಖಾಲಿ ಜಾಗ ಇದೆ. ಪ್ರಸ್ತುತ ದಾವೆಯನ್ನು ಮನೆಯ ಆಸ್ತಿಯ ವಿಚಾರವಾಗಿ ಹೂಡಿರುತ್ತಾರೆ. ಸದರಿ ಮನೆ ಮೊದಲು ನರಸಿಂಹಪ್ಪ ಎನ್ನುವವರಿಗೆ ಸೇರಿದ್ದು ಅದನ್ನು 1ನೇ ವಾದಿ ಖರೀದಿ ಮಾಡಿರುತ್ತಾರೆ. ಸದರಿ ಮಾರಾಟದ ಸಮಯಕ್ಕೆ ನರಸಿಂಹಪ್ಪನವರು ತಮ್ಮ ಅನುಭವದಲ್ಲಿದ್ದಂತಹ ಆಸ್ತಿಯನ್ನು ಯಥಾವತ್ತಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಖಾಲಿ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರದ ಕುರಿತು ನಾನು ಪತ್ರವನ್ನು ನೋಡಿರುತ್ತೇನೆ. ಸದರಿ ವ್ಯವಹಾರ ಯಾವ ವರ್ಷದಲ್ಲಿ ನಡೆಯಿತು ಎಂದು ನನಗೆ ನೆನಪಿಲ್ಲ.ಸದರಿ ಪತ್ರವನ್ನು ನಾನು ಸುಮಾರು 4-5ವರ್ಷಗಳ ಹಿಂದೆ ವಾದಿ ಮತ್ತು ಪ್ರತಿವಾದಿಗಳನ್ನು ಊರಿನಲ್ಲಿ ಹಿರಿಯರ ಸಮಕ್ಷಮ ಪಂಚಾಯತಿ ಮಾತುಕತೆಗೆ ಕೂರಿಸಿದಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ನಾನು ನೋಡಿದ ಪತ್ರದಲ್ಲಿ ಖಾಲಿ ಜಾಗಕ್ಕೆ ಮನೆಯಿತ್ತು, ಸದರಿ ಮನೆ ದಾಖಲೆಯ ಪ್ರಕಾರ ಪೂರ್ವ-ಪಶ್ಚಿಮ 22 ವರೆ ಅಡಿ , ಉತ್ತರ-ದಕ್ಷಿಣ 25ವರೆ ಅಡಿ ಇತ್ತು. ಸಾಕ್ಷಿ ಮುಂದುವರೆದು 22 ಅಡಿ ಮನೆ ಇದೆ, 3ವರೆ ಅಡಿ ಖಾಲಿ ಜಾಗವಿದೆ ಎಂದು ನುಡಿಯುತ್ತಾರೆ. ಸದರಿ ಪೂರ್ವ-ಪಶ್ಚಿಮ 22 ವರೆ ಅಡಿಗೂ ಮನೆ ಇದೆ. ಉತ್ತರ-ದಕ್ಷಿಣ 25ವರೆ ಅಡಿ ಇದ್ದ ಅದರಲ್ಲಿ 22 ಅಡಿ ಮನೆ ಇದೆ. 3ವರೆ ಖಾಲಿ ಜಾಗ ಇದೆ. ಸದರಿ ಖಾಲಿ ಜಾಗ ಮನೆಯ ಉತ್ತರ ದಿಕ್ಕಿಗೆ ಇದೆ. ಸದರಿ ಉತ್ತರ ದಿಕ್ಕಿಗೆ 1 ನೇ ಪ್ರತಿವಾದಿಯ ಕರಿಹೆಂಚಿನ ಮನೆ ಇತ್ತು ಎಂದರೆ ಸರಿ. ಸದರಿ ಮನೆಯನ್ನು ಸುಮಾರು 5-6ವರ್ಷಗಳ ಹಿಂದೆ ಕೆಡವಿರುತ್ತಾರೆ. 1ನೇ ವಾದಿಯ ಮನೆ ಮತ್ತು 1 ನೇ ಪ್ರತಿವಾದಿಯ ಮನೆಗಳು ಹೊಂದಿಕೊಂಡಂತೆ ಇದ್ದವು ಎಂದರೆ ಸಾಕ್ಷಿ ಸದರಿ ಮನೆಗಳ ನಡುವೆ 3 ವರೆ ಖಾಲಿ ಜಾಗ ಇತ್ತು ಎಂದು ನುಡಿಯುತ್ತಾರೆ. ಸದರಿ ಮನೆಗಳ ನಡುವೆ 3

ವರೆ ಅಡಿ ಖಾಲಿ ಜಾಗ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ದಾಖಲೆ ನೋಡಿಲ್ಲ. 1ನೇ ಪ್ರತಿವಾದಿಯ ಮನೆ ಕೆಡವುದಕ್ಕೂ ಮುನ್ನ 1ನೇ ವಾದಿಯ ಮನೆ ಸದರಿಯವರ ಮನೆಗೆ ಹೊಂದಿಕೊಂಡಿತ್ತು ಎಂದರೆ ಸಾಕ್ಷಿ ಮಧ್ಯ ಗ್ಯಾಪ್ ಇತ್ತು ಎಂದು ನುಡಿಯುತ್ತಾರೆ. ವಾದಿಗಳು ತಾವು ಖರೀದಿಸಿದ ಆಸ್ತಿಯಲ್ಲಿ ಸಂಪೂರ್ಣವಾಗಿ ಯಾವುದೇ ಜಾಗವನ್ನು ಬಿಡದೆ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಅಳತೆ ಕಾರ್ಯವನ್ನುಮಾಡಿಲ್ಲ ಎಂದರೆ ಸರಿ. ಹಾಗಾಗಿ ನನಗೆ ಸದರಿ ಮನೆಯ ಅಳತೆಗಳ ವಿವರ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

ನಾನು ಸಿದ್ದನಮಠ ಗ್ರಾಮ ಪಂಚಾಯತಿಯ ಸದಸ್ಯ. ಜನರ ನಡುವೆ ಆಸಿತಯ ಚೆಕ್ಕುಬಂದಿ ಮತ್ತು ವಿಸ್ತಿರ್ಣದ ಕುರಿತು ವಿವಾದ ಉಂಟಾದರೆ ಅವರಿಂದ ಅರ್ಜಿಯನ್ನು ಪಡೆದು ಸ್ಥಳ ತನಿಖೆಯನ್ನು ಮಾಡಿ ವಸ್ತುಸ್ಥಿತಿಯಂತೆ ವರದಿಯನ್ನು ತಯಾರಿಸುತ್ತೇವೆ ಎಂದರೆ ಸರಿ. ಸದರಿ ವಿವಾದಿತ ಆಸ್ತಿ ನಮ್ಮ ಪಂಚಾಯತಿ ವ್ಯಾಪ್ತಿಗೆ ಒಳಪಡುತ್ತದೆ. ನಮ್ಮ ಪಂಚಾಯತಿಗೆ ದಾವಾ ಹೂಡುವ ಪೂರ್ವದಲ್ಲಾಗಲಿ ಅಥವಾ ದಾವಾ ಹೂಡಿದ ನಂತರದಲ್ಲಾಗಲಿ ವಾದಿಗಳು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಹಾಗಾಗಿ ನನಗೆ ವಾದಿ ಮತ್ತು ಪ್ರತಿವಾದಿಗಳ ಆಸ್ತಿಯ ಅಳತೆ ಮತ್ತು ಚೆಕ್ಕುಬಂದಿ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಎರಡೂ ಪಕ್ಷಗಾರರು ಪಂಚಾಯತಿಗೆ ಅರ್ಜಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನನಗೆ ಸದರಿ ಆಸ್ತಿಗಳ ವಿವರ ವಸ್ತುಸ್ಥಿತಿಯನ್ನು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ಹಾಗಾಗಿ ನನಗೆ ವಸ್ತುಸ್ಥಿತಿ ಗೊತ್ತಿಲ್ಲದ ಕಾರಣ ಪ್ರಮಾಣಪತ್ರದ ವಿಷಯಗಳನ್ನು 4 ನೇ ವಾದಿ ಬರೆಸಿರುತ್ತಾರೆ. ಸದರಿಯವರು ಬರೆಸಿದಪ್ರಮಾಣಪತ್ರಕ್ಕೆ ನಾನು ಸಹಿ ಹಾಕಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಹಾಗಾಗಿ ಸದರಿ ಪ್ರ.ಪತ್ರದಲ್ಲಿನ ಅಳತೆಗಳು ಮತ್ತು ಸಂಖ್ಯೆ ಗಳು ನನಗೆವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ ಆಸ್ತಿಯ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಪ್ರತಿವಾದಿಗಳಿಗೆ ಅವರ ಆಸ್ತಿ ಯಾವ ರೀತಿ ಬಂತು ಮತ್ತು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಆಸ್ತಿಯ ಪತ್ರ ಮತ್ತು ಅಳತೆಗಳ ಕುರಿತುನಾನು ಯಾವುದೇ ದಾಖಲೆ ನೋಡಿಲ್ಲ, ಹಾಗಾಗಿ ಪ್ರತಿವಾದಿಗಳ ಆಸ್ತಿಯ ಕುರಿತು ನನಗೆಯಾವುದೇ ಮಾಹಿತಿ ಗೊತ್ತಿಲ್ಲ ಎಂದರೆ ಸರಿ.ಪ್ರತಿವಾದಿಗಳ ಆಸ್ತಿ ಸಂಖ್ಯೆ 149 ಎಂದರೆ ನನಗೆ ನೆನಪಿಲ್ಲ. ಸದರಿಯವರ ಆಸ್ತಿಯ ಅಳತೆ ಪೂರ್ವ-ಪಶ್ಚಿಮ 25ವರೆ ಅಡಿ , ಉತ್ತರ -ದಕ್ಷಿಣ 27 ವರೆ ಅಡಿ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಮನೆಯ

ಚೆಕ್ಕುಬಂದಿ ಪೂರ್ವಕ್ಕೆ ನಾಗಪ್ಪನ ಆಸ್ತಿ ಎಂದರೆ ಸರಿ. , ಪಶ್ಚಿಮ ಮತ್ತು ಉತ್ತರಕ್ಕೆ ಪಂಚಾಯತಿ ರಸ್ತೆ ಎಂದರೆ ಸರಿ. , ದಕ್ಷಿಣಕ್ಕೆ ವಾದಿಯ ಮನೆ ಎಂದರೆ ಸಾಕ್ಷಿ ಖಾಲಿ ಜಾಗ ಬರುತ್ತದೆ ಎಂದು ನುಡಿಯುತ್ತಾರೆ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.